ಅರ್ಥ ಮಾಡಿಕೊಳ್ಳುವುದನ್ನು ಅಷ್ಟು ಹೊತ್ತಿಗಾಗಲೇ ಕಲಿತಿದ್ದಳು. ಅವಳ ಮನಸ್ಸಿನಲ್ಲಿ ಭಾವನೆಗಳಾಗಲಿ, ಕನಸುಗಳಾಗಲಿ ಹುಟ್ಟದೆ ವರ್ಷಗಳೇ ಕಳೆದಿತ್ತು.

ಡಿಜೇ ಹುಡುಗ ಹಾಡಿನ ಸದ್ದನ್ನು ಜಾಸ್ತಿ ಮಾಡಿದ. ಕೆಂಪು ಘಾಗ್ರಾ-ಚೋಲಿ ಧರಿಸಿದ ಮದುಮಗಳು, ತಿಳಿ ಗುಲಾಬಿ ಬಣ್ಣದ ಸೂಟಿನಲ್ಲಿದ್ದ ಮದುಮಗ ಕೈಕೈ ಹಿಡಿದುಕೊಂಡು ಸ್ಟೇಜಿನ ಮೇಲೆ ಬಂದರು. ಹೊರಗಡೆ ಪರಮೇಶ್ವರ ಪಟಾಕಿ ಸಿಡಿಸಿದ. ರಿಸೆಪ್ಶನ್ ಹಾಲ್‌ನಲ್ಲಿ ವಧು- ವರರಿಗೆ ಶುಭಾಶಯ ಹೇಳಲು ಹೊರಟವರ ಕ್ಯೂ ಹಾಲ್‌ನ ತುದಿಯವರೆಗೂ ಮುಟ್ಟಿತು, ಕೆಲವರಾಗಲೇ ಊಟಕ್ಕೆ ಹೊರಟರು.

ಪರಮೇಶ್ವರನಿಗೆ ಹೊಟ್ಟೆ ಚುರುಗುಟ್ಟಿತು. ಬೆಳಗ್ಗೆ ತಿಂದಿದ್ದು, ಅದರ ಮೇಲೆ ಏನೂ ತಿಂದಿರಲಿಲ್ಲ, ಏನಾದರೂ ತಿನ್ನೋಣವೆಂದರೆ ಊರ ಹೊರಗಿರುವ ರೆಸಾರ್ಟಿನ ಅಕ್ಕಪಕ್ಕ ಯಾವ ಚಿಕ್ಕ ಹೊಟೇಲ್ ಇಲ್ಲ. ಡೈನಿಂಗ್ ಹಾಲಿಗೆ ಬಂದಾಗ ಸಾಕಷ್ಟು ಜನರು ಊಟಕ್ಕೆ ಕುಳಿತಿರುವುದು ಕಾಣಿಸಿತು. ಬಿಳಿ ಜುಬ್ಬ, ನೀಲಿ ಕಚ್ಚೆ ಪಂಚೆ ಯೂನಿಫಾರ್ಮ್ ಧರಿಸಿದ ಕೇಟರಿಂಗ್ ಕಂಪೆನಿಯ ಹುಡುಗರು ಬಡಿಸುತ್ತಿದ್ದರು. ಅವರ ತಲೆಯ ಮೇಲೆ ಜಾರುವಂತಿದ್ದ ಪೇಟ ಬೇರೆ, ಅದನ್ನು ಸರಿಪಡಿಸಿಕೊಳ್ಳುತ್ತಾ ಬಡಿಸಲು ಒದ್ದಾಡುತ್ತಿದ್ದರು. ಬಡಿಸುವ ಹುಡುಗನೊಬ್ಬನನ್ನು ಎಲ್ಲೋ ನೋಡಿದ್ದೇನೆ ಎನಿಸಿತು. ಪರಪರ ತಲೆ ತುರಿಸಿಕೊಂಡಾಗ ನೆನಪಾಯಿತು, ಮೂರು ವರ್ಷಗಳ ಕೆಳಗೆ ತನ್ನಡೊನೆ ಕೆಲಸ ಮಾಡುತ್ತಿದ್ದ ಗಿರೀಶ್ ಇವನಲ್ವಾ? ಈಗ ದೊಡ್ಡ ಮೀಸೆ ಬೆಳೆಸಿಕೊಂಡಿದ್ದಾನೆ. ಆದರೂ ಗುರುತಿಸಿದೆ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡ. ಆದರೆ ಮೂರು ವರ್ಷಗಳ ಕೆಳಗೆ ಸಿಟ್ಟಿನಲ್ಲಿ ಮಾಲೀಕನೊಡನೆ ಹೊಡೆದಾಡಿ, ಚೂರಿ ಇರಿದು ಜೈಲು ಸೇರಿದ್ದ. ನಾಲ್ಕು ವರ್ಷದ ಜೈಲು ಶಿಕ್ಷೆಯಾಗಿತ್ತು, ಇವನ್ಹೇಗೆ ಹೊರಗೆ ಬಂದ? ಅಲ್ಲದೆ ಕೆಲಸಕ್ಕೆ ಬೇರೆ ಸೇರಿಕೊಂಡಿದ್ದಾನೆ, ಅವನನ್ನು ಮಾತಾಡಿಸಿದಾಗ ಮುಖ ಹುಳ್ಳಗೆ ಮಾಡಿಕೊಂಡ. ಏನೂ ಹೇಳಬೇಡ ಮಾರಾಯ ಎನ್ನುತ್ತಾ ಪ್ಲೇಟಿಗೆ 2 ಒಬ್ಬಟ್ಟು ಮೇಲೊಂದಿಷ್ಟು ತುಪ್ಪ, ಮೂರು ಬೋಂಡ ಕೊಟ್ಟು ಬಾಯಿ ಮುಚ್ಚಿಸಿದ.

ಒಬ್ಬಟ್ಟು ತಿಂದು ಕೈ ತೊಳೆದು ಬರುತ್ತಿದ್ದಂತೆ ಹಣ್ಣಿನ ಹೋಳುಗಳ ತಟ್ಟೆಯನ್ನು ಕೊಡುತ್ತಿದ್ದ ಸುಜಾತ ಕಾಣಿಸಿದಳು, ನೀಲಿ ಬಣ್ಣದಫಳಫಳ ಹೊಳೆಯುವ ಸೀರೆ ಉಟ್ಟಿದ್ದಳು. ಅರೆ ಇವಳ್ಯಾಕೆ ಕೇಟರಿಂಗ್ ಕಂಪೆನಿಯ ಹುಡುಗಿಯರ ಯೂನಿಫಾರ್ಮ್ ಧರಿಸಿದ್ದಾಳೆ? ಮುಖಕ್ಕೆ ಮೇಕಪ್, ತುಟಿಗೆ ಲಿಪ್‌ಸ್ಟಿಕ್ ಬೇರೆ ಹಾಕಿಕೊಂಡಿದ್ದಾಳೆ. ಉದ್ದ ಕೋಲಿನಂತಿದ್ದವಳು ಈಗ ಮಿಟಕಲಾಡಿ ಮೀನಾಕ್ಷಿಯಂತೆ ಕಾಣಿಸುತ್ತಿದ್ದಾಳೆ. ಒಪ್ಪವಾಗಿ ಡ್ರೆಸ್ ಮಾಡಿಕೊಂಡರೆ ಇವಳೂ ಸುಂದರಿಯೇ. ಸ್ವಲ್ಪ ಉದ್ದ ಅಷ್ಟೇ, ಈಗ ಒಂದೊಂದು ಹೆಣ್ಣು ಮಕ್ಕಳು ಉದ್ದಕ್ಕೆ ಬೆಳೆದಿರುತ್ತಾರೆ. ಕೆಲವು ಮದುವೆಯಲ್ಲಿ ನೋಡಿಲ್ಲವೇ? ಆದರೂ ಎರಡಿಂಚು ಕಡಿಮೆ ಇದ್ದರೆ ತನಗೆ ಜೋಡಿಯಾಗುತ್ತಿದ್ದಳು ಎನಿಸಿತವನಿಗೆ. ಸುಜಾತಾಳಿಗೆ ಕಣ್ಣು ಹೊಡೆದು, ಕಣ್ಣು ಸನ್ನೆ ಮಾಡಿ ಬದಿಗೆ ಕರೆದ. ಅವಳ ಮುಖ ಕೆಂಪಾಯಿತು. ಇನ್ನೂ ಅಲ್ಲೇ ನಿಂತರೆ ಮತ್ತೇನಾದರೂ ಚೇಷ್ಟೆ ಮಾಡಿಯಾನು ಎಂದುಕೊಂಡು ತಾಂಬೂಲದ ರಾಶಿಯ ಹಿಂದೆ ಹೋದಳು.

'ಏನಮ್ಮಿ ಗೋತ್ತೇ ಆಗೋಲ್ಲ, ಇದ್ಯಾಕೆ ಕೇಟರಿಂಗ್ ಕಂಪೆನಿಯ ಯೂನಿಫಾರ್ಮ್ ಹಾಕ್ಕೊಂಡಿದಿ?' ಎಂದನು ತನಗಿಂತ ಎರಡಿಂಚು ಉದ್ದ ಇದ್ದವಳ ಕಣ್ಣಲ್ಲಿ ಕಣ್ಣಿಟ್ಟು ನೋಡಲು ಪ್ರಯತ್ನಿಸುತ್ತಾ...

'ಅಯ್ಯೋ, ಬಡಿಸುವವರು ಕಡಿಮೆ ಇದ್ದಾರಂತೆ, ನೀನೇ ಹಣ್ಣಿನ ಹೋಳುಗಳನ್ನು ಕೊಡಮ್ಮ ಅಂತ ಯೂನಿಫಾರ್ಮ್ ಸೀರೆ ಕೊಟ್ರು, ಉಟ್ಕೊಂಡೆ, 200 ರೂಪಾಯಿ ಕೊಡ್ತಾರಂತೆ' ಖುಷಿಯಿಂದ ನಕ್ಕು ವಯ್ಯಾರದಿಂದ ಸೀರೆಯ ನೆರಿಗೆಯನ್ನು ಸರಿ ಪಡಿಸಿಕೊಂಡಳು.

'ಆ ಕೆಲ್ಸ ಬಿಟ್ಟು ಇದೇ ಕೆಲ್ಸಕ್ಕೆ ಸೇರ್ಕೋ, ಹೆಚ್ಚು ಕಷ್ಟ ಆಗೋಲ್ಲ' ಅವನೆಂದಾಗ 'ಅಯ್ಯೋ ಮಾವ ಒಪ್ಪ ಬೇಕಲ್ಲ' ಎನ್ನುತ್ತಲೇ ತನ್ನ ಕೆಲಸದತ್ತ ಹೊರಟಳು. ಚಿಕ್ಕ ಮಕ್ಕಳ ಕೈಯಲ್ಲಿ ಅಪರೂಪಕ್ಕೆ ಚಾಕೊಲೇಟ್ ಸಿಕ್ಕಾಗ ಆಗುವ ಮುಗ್ಧ ಖುಷಿ, ನಗು ಅವಳಲ್ಲಿತ್ತು.

ಪಕ್ಕನೆ ಕುಸುಮಾಳ ನೆನಪಾಗಿ ಗಂಟಲು ಕಟ್ಟಿತು ಪರಮೇಶ್ವರನಿಗೆ, ತನ್ನ ಕುಸುಮಾಳೂ ನೀಲಿ ಬಣ್ಣದ ಯೂನಿಫಾರ್ಮ್ ಸೀರೆ ಧರಿಸುತ್ತಿದ್ದಳು. ಅವಳು ನೆರಿಗೆ ಚಿಮ್ಮಿಸಿ ನಡೆದರೆ ಹಂಸ ನೀರಿನಲ್ಲಿ ತೇಲಾಡಿದಂತೆ ಕಾಣಿಸುತ್ತಿತ್ತು. ಕುಸುಮಾ ಸುಂದರಿ, ಅಪ್ಪಿತಪ್ಪಿ ಕೇಟರಿಂಗ್ ಕಂಪೆನಿಯಲ್ಲಿ ಬಡಿಸಲು ಸೇರಿಕೊಂಡಳು